GOVERNOR'S RECOMMENDATION

MR. SPEAKER.—I have received the recommendation of the Governor for the consideration of the Karnataka Land Reforms Amendment Bill, 1978 as required by clause 3 of Article. 207 of the constitution Now the Hon'ble Minister for Revenue may move the consideration Motion.

Motion to consider

SRI B. BASAVALINGAPPA.—Sir, I beg to move :

"That the Karnataka Land Reforms (Amendment) Bill, 1978 be taken in to consideration."

The question was proposed

ಮಾನ್ಯ ಅಧ್ಯಕ್ಷರೇ ಈ ಭೂಸುಧಾರಣೆಯ ಮಸೂದೆ ಏನಿದೆ ಇದಕ್ಕೆ ತಿದ್ದುಪಡಿಯನ್ನು ತರತಕ್ಕ ಅವಶ್ಯಕತೆ ಜಾಸ್ತಿಯಾಗಿದೆ. ಇಪ್ಪ ವರ್ಷಗಳಿಂದ ಈ ಮಸೂದೆಯನ್ನು ನಾವು ಕಾರ್ಯಗತ ಮಾಡುವಾಗ ನಮಗೆ ಉಂಟಾಗಿರತಕ್ಕ ಕೆಲವು ಅನುಭವಗಳು ಮತ್ತೆ ಕೋರ್ಟುಗಳಿಂದ ತೀರ್ಪು ಕೊಟ್ಟ ಒಂದು ನಿರ್ಣಯದ ಮೇಲೆ ನಾವು ಈ ಒಂದು ತಿದ್ದುಪಡಿಯನ್ನು ತರತಕ್ಕಂಥಾ ಸಂದರ್ಭ ಬಂದಿದೆ. ಭೂಸುಧಾರಣೆ ಮಸೂದೆಯಲ್ಲಿ ಹೆಚ್ಚುವರಿ ಜಮೀನನ್ನು ಹಂಚುವ ವಿಚಾರದಲ್ಲಿ ನಾವು ಒಂದು ಸ್ಥಗಿತವಾಗಿರತಕ್ಕ ಪರಿಸ್ಥಿತಿಯಲ್ಲಿದ್ದೇವೆ. ನಾವು ಹೆಚ್ಚುವರಿ ಜಮೀನನ್ನು ಹಂಚುವುದಕ್ಕೆ ಆಗಿಲ್ಲ. ಹೀಗಾಗಿ ನಾವು ಯಾವ ಉದ್ದೇಶದಿಂದ ಭೂ ಸುಧಾರಣಾ ಕಾನೂನನ್ನು ಕರ್ನಾಟಕದಲ್ಲಿ ಜಾರಿಗೆ ಕೊಟ್ಟಿದ್ದೇವೆ ಅದು ನೂರಕ್ಕೆ ನೂರುಭಾಗ ಯಾರಿಗೋಸ್ಕರ ಉಪಕಾರ ಆಗಬೇಕಾಗಿತ್ತು, ಅನುಕೂಲ ಆಗಬೇಕಾಗಿತ್ತು ಅವರಿಗೆ ಅಷ್ಟಾಗಿ ಅನುಕೂಲವಾಗಿಲ್ಲ ಎಂದು ನಾನದರೂ ಸ್ಪಷ್ಟವಾಗಿ ತಿಳಿಸುತ್ತೇನೆ. ಆದ್ದರಿಂದ ಸರ್ಕಾರದವರು ಬಹಳ ದಿವಸಗಳಿಂದ ಈ ಒಂದು ತಿದ್ದುಪಡಿಯನ್ನು ತರಬೇಕು ಎಂದು ಯೋಚನೆ ಮಾಡಿದ್ದಾರೆ. ಇವೊತ್ತು ಇದನ್ನು ತಂದಿದ್ದೇವೆ. ಮತ್ತು ತಿದ್ದುಪಡಿ ಮಸೂದೆಯಲ್ಲಿ ಹಲವಾರು ಕಲಮ್‌ಗಳು ಇವೆ. ಭೂಸುಧಾರಣೆಯ ಮಸೂದೆಯ ಕಲಮ್‌ಗಳಿಗೆ ತಿದ್ದುಪಡಿಯನ್ನು ತಂದು ಬಹಳ ಸುಗಮವಾಗಿ ಭೂ ಸುಧಾರಣೆ ಜಾರಿಗೆ ಬರಬೇಕು ಯಾರಿಗೋಸ್ಕರ ಭೂಸುಧಾರಣೆಯ ಕಾನೂನು ಕರ್ನಾಟಕದಲ್ಲಿ ಇದೆ ಅವರಿಗೆ ಅನುಕೂಲವಾಗಬೇಕು ಎಂಬ ಉದ್ದೇಶದಿಂದ ಸರ್ಕಾರ ಯೋಚನೆ ಮಾಡಿ ಈ ಒಂದು ಮಸೂದೆಯನ್ನು ತಂದಿದ್ದೇವೆ. ತಿದ್ದುಪಡಿ ತಂದಿರುವ ಪ್ರತಿಯೊಂದು ಕಲಮನ್ನೂ ಸಭೆಯ ಮುಂದೆ ವಿವರಣೆ ಕೊಟ್ಟು ಈ ಸಭೆಯ ಮಾನ್ಯ ಸದಸ್ಯರ ಗಮನಕ್ಕೆ ತರಬೇಕು ಎಂದು ಬಯಸಿ ಅದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ.

೧೯ನೇ ಕಲಂನಲ್ಲಿ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಯಾರು ಸೈನಿಕರು ಹೋರಾಟ ಮಾಡಿ ಸತ್ತು ಹೋಗುತ್ತಾರೆ ಅಂಥವರ ಸಂಸಾರಕ್ಕೆ ಉಪಕಾರವಾಗಬೇಕು ಎಂದು ತಂದೆ ತಾಯಿ, ಹೆಂಡತಿ, ಮಕ್ಕಳು ಜಮೀನನ್ನು ಮಾರಿ ತಮ್ಮ ಪರಿಸ್ಥಿತಿಯನ್ನು ಉತ್ತಮ ಪಡಿಸುವುದಕ್ಕೆ ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಆ ಮೇಲೆ ಕಲಂ ೨೦ರ ಪ್ರಕಾರ ಕೆಲವು ಜಮೀನ್ದಾರರಿಂದ ಗೇಣಿದಾರರು ಭೂಮಿಯೆನ್ನು ಪಡೆದುಕೊಂಡು ಯಾವ ಉದ್ದೇಶದಿಂದ ಅದನ್ನು ಪಡೆದುಕೊಂಡರೋ ಆ ಉದ್ದೇಶಕ್ಕೆ ಉಪಯೋಗಿಸದೆ ಅದನ್ನು ಆಬಾದು ಮಾಡದೆ ಯಾರು ಇಟ್ಟುಕೊಂಡಿರುತ್ತಾರೆ ಅಂಥವರಿಂದ ಜಮೀನು ತೆಗೆದುಕೊಂಡು ಸರ್ಕಾರದ ಕಾನೂನು ಪ್ರಕಾರ ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗುತ್ತದೆ. ಯಾರು ಗೇಣಿದಾರ ಜಮೀನನ್ನು ಕಳೆದುಕೊಂಡಿರುತ್ತಾನೆಯೋ ಅವನು ೧೨ ತಿಂಗಳೊಳಗಾಗಿ ಅರ್ಜಿಯನ್ನು ಹಾಕಿದರೆ ಅವನಿಗೆ ಪುನಃ ಜಮೀನು ಮಂಜೂರು ಮಾಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಕಲಂ ೩೮ರ ಪ್ರಕಾರ ಅಗ್ರಿಕಲ್‌ಚರಲ್ ಲೇಬರರ್ಸ್, ವ್ಯವಸಾಯ ಕೂಲಿಗಾರರು ಅವರು ಎಲ್ಲೆಲ್ಲಿ ಗುಡಿಸಲು ಮತ್ತು ಮನೆಗಳನ್ನು ಕಟ್ಟಿಕೊಂಡಿದ್ದಾರೆ ಅಂಥವರಿಗೆ ಪುನ: ಆ ಜಮೀನನ್ನು ಕೊಡತಕ್ಕ ವ್ಯವಸ್ಥೆಯನ್ನು ಈ ತಿದ್ದುಪಡಿ ಮಸೂದೆಯಲ್ಲಿ ಆಳವಡಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಮತ್ತು ಮಲೆನಾಡು ಪ್ರದೇಶದಲ್ಲಿ ಹಳ್ಳಿಗಳಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡಿರುತ್ತಾರೆ, ಮನೆಗಳನ್ನು ಕಟ್ಟಿಕೊಂಡಿರುತ್ತಾ, ಜಮೀನಿನ

ಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಾರೆ, ಅಂಥವರನ್ನು ಒಕ್ಕಲೆಬ್ಬಿಸುವ ಪದ್ಧತಿ ಇದೆ. ಅಂಥವರಿಗೆ ಶಾಸ್ತ್ವತವಾದ ಪರಿಹಾರವನ್ನು ಕೊಡಬೇಕು ಎಂದು ಸರ್ಕಾರ ಯೋಚನೆ ಮಾಡಿ ಯಾರು ಯಾರು ವ್ಯವಸಾಯ ಕೂಲಿಗಾರರು ಇದ್ದಾರೆ ಅಂಥವರಿಗೆ ಅಲ್ಲಿರತಕ್ಕ ಮನೆಯ ಸ್ಥಳ ಇದ್ದರೆ ಅವರು ವಾಸವಾಗಿರತಕ್ಕ ಸ್ಥಳವನ್ನು ಅವರಿಗೇ ಕೊಡಬೇಕು ಎಂದು ೩೮ನೇ ಕಾಲಂನಲ್ಲಿ ತಿದ್ದುಪಡಿ ಮಾಡಿದ್ದೇವೆ. ಇದರಿಂದ ಪ್ರತಿಯೊಬ್ಬ ಕೂಲಿಗಾರರಿಗೂ ನಿವೇಶನ ಸಿಕ್ಕತಕ್ಕಂಥಾ ವ್ಯವಸ್ಥೆ ಯಾಗುತ್ತದೆ. ೩೫ × ೪೦ ಅಡಿ ಅಗಲದ ಪ್ರದೇಶ ಇರತಕ್ಕ ಮನೆಯ ಸೈಟು ಸಿಕ್ಕತಕ್ಕ ಪ್ರಸಂಗ ಬರುತ್ತದೆ. ೪೮ನೇ ಕಲಂ ಪ್ರಕಾರ ೧೯೭೪ನೇ ಇಸವಿ ೩೦ನೇ ತಾರೀಖಿನವರೆಗೆ ಯಾರು ಯಾರು ಅರ್ಜಿಗಳನ್ನು ಹಾಕುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ ಆ ಅರ್ಜಿಗಳನ್ನು ಟ್ರಿಬ್ಯುನಲ್‌ನವರು ತೀರ್ಮಾನ ಮಾಡುತ್ತಾರೆ, ಮತ್ತು ೧೯೭೭ನೇ ಇಸವಿ ಜೂನ್ ೩೯ನೇ ತಾರೀಖಿನವರೆಗೆ ಸಫಿಷಿಯೆಂಟ್ ರೀಜನ್ ಕೊಟ್ಟು ಅರ್ಜಿ ಹಾಕಿದ್ದರೆ ಅಂಥಾ ಅರ್ಜಿಗಳನ್ನು ಟ್ರಿಬ್ಯುನಲ್‌ಗಳು ತೆಗೆದುಕೊಂಡು ವಿಲೇವಾರಿ ಮಾಡುತ್ತಾರೆ. ಇದನ್ನು ಈ ಕಾಲಂನಲ್ಲಿ ಅಳವಡಿಸಿದ್ದೇವೆ. ಕೆಲವು ಗೇಣಿದಾರರು ಸಫಿಷಿಯಂಟ್ ಕಾರಣವನ್ನು ಸಮಜಾಯಿಷಿಯನ್ನು ಕೊಡದೆ ಅರ್ಜಿಯನ್ನು ಹಾಕಿದ್ದರು. ಅಂಥಾ ಅರ್ಜಿಗಳನ್ನು ಟ್ರಿಬ್ಯುನಲ್ ಅವರ ಪರವಾಗಿ ತಿರ್ಮಾನ ಮಾಡಿದರೂ ಕೂಡ ಹೈಕೋರ್ಟಿಗೆ ಸಂಬಂಧಪಟ್ಟವರು ರಿಟ್‌ಪಿಟಿಷನ್ ಹಾಕಿ ಸಫಿಷಿಯಂಟ್ ಸಮಜಾಯಿಷಿ ಕೊಟ್ಟಿಲ್ಲ ಎಂದು ಸಾವಿರ ಅರ್ಜಿಗಳನ್ನು ತಿರಸ್ಕಾರ ಮಾಡಿದ್ದಾರೆ. ಆದ್ದರಿಂದ ಎಲ್ಲರಿಗೂ ಕೂಡ ಒಂದು ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಹೈಕೋರ್ಟ್ ತೀರ್ಪುಕೊಟ್ಟಿದ್ದನ್ನು ಗಮನದಲ್ಲಿಟ್ಟುಕೊಂಡು ಯಾರು ಯಾರು ಗೇಣಿದಾರರು ಕೇಸನ್ನು ಕಳೆದುಕೊಂಡಿದ್ದಾರೆ ಅಂಥಾ ಕೇಸನ್ನು ಪುನ: ಕನ್‌ಸಿಡರ್ ಮಾಡಿ ಅಂಥವರಿಗೆ ಅನುಕೂಲ ಮಾಡಬೇಕು ಎನ್ನುವ ದೃಷ್ಟಿಯಿಂದ ಮತ್ತು ಇನಾಮ್ ಅಬಾಲಿಷನ್‌ಗೆ ಸಂಬಂಧಪಟ್ಟ ಗೇಣಿದಾರರಿಗೂ ಇಲ್ಲಿ ಈ ಒಂದು ಕಾಯಿದೆಯಲ್ಲಿ ಟ್ರಿಬ್ಯುನಲ್ ಮುಂದೆ ಅರ್ಜಿಯನ್ನು ಹಾಕಬಹುದು ಎಂದು ಹೈಕೋರ್ಟಿನವರು ತೀರ್ಪು ಕೊಟ್ಟಿದ್ದಾರೆ. ಅದರ ಪ್ರಕಾರ ಈ ಒಂದು ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ. ಹೀಗಾಗಿ ನಾವು ಈ ಒಂದುಕಾಲದ ಮಿತಿಯನ್ನು ವಿಸ್ತರಣೆ ಮಾಡಿದ್ದೇವೆ. ಈ ತಿದ್ದುಪಡಿ ಮಸೂದೆ ಜಾರಿಗೆ ಬಂದ ೩ ತಿಂಗಳೆದಳಗಾಗಿ ಯಾರು ಬೇಕಾದರೂ ಅರ್ಜಿಯನ್ನು ಹಾಕಬಹುದು. ಪುನ: ಟ್ರಿಬ್ಯುನಲ್‌ನವರು ಅರ್ಜಿಯನ್ನು ಪರಿಶೀಲನೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು. ಈ ದೃಷ್ಟಿಯಿಂದ ಇದರಲ್ಲಿ ತಿದ್ದುಪಡಿಯನ್ನು ತಂದಿದ್ದೇವೆ. ಕಾಲಂ ೪೮ (೩)ನಲ್ಲಿ ಟ್ರಿಬ್ಯುನಲ್‌ನವರು ಇಂಜಕ್ಷನ್ ಕೊಡತಕ್ಕ ವ್ಯವಸ್ಥೆ ಇದರಲ್ಲಿ ಇದೆ. ಆದ್ದರಿಂದ ಛೇರ್ಮನ್ ಆಗಿರತಕ್ಕಂಥ ಅಸಿಸ್ಟೆಂಟ್ ಕಮಿಷನರ್‌ರವರು ಇಂಜಂಕ್ಷನ್ ಕೊಟ್ಟು ಟ್ರಿಬ್ಯುನಲ್ ಮುಂದೆ ಅವರ ಒಪ್ಪಿಗೆ ಪಡೆಯುವುದಕ್ಕೆ ಅನುಕೂಲವಾಗಲೆಂದು ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಸೆಕ್ಷನ್ ೫೧ರ ಪ್ರಕಾರ ಅಪ್ರಾಪ್ತರು, ಅಂಗವಿಕಲರು ಮದುವೆಯಾಗದ ಹೆಣ್ಣುಮಕ್ಕಳು, ವಿಧವೆಯರು ಇದ್ದರೆ ಅಂಥವರಿಗೆ ಮತ್ತು ೨೪೦೦ ರೂ.ಗಳಿಗಿಂತ ಕಡಿಮೆ ವಾರ್ಷಿಕ ಆದಾಯ ಇರುವವರಿಗೆ ಒಂದೇ ಗಂಟಿನಲ್ಲಿ ಪರಿಹಾರವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಸೆಕ್ಷನ್ ೫೫ರ ಪ್ರಕಾರ ಗೇಣಿದಾರರ ಪರವಾಗಿ ಅಥವಾ ಭೂ ಮಾಲೀಕನ ಪರವಾಗಿ ಟ್ರಿಬ್ಯುನಲ್‌ನವರು ಹುಕುಂ ಮಾಡಿದರೆ ಅದನ್ನು ಪುನಃ ರಿಜಿಸ್ಟರ್ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ೬೧ನೇ ಕಾಲಂ ಪ್ರಕಾರ ಯಾರ್ಯಾರಿಗೆ ನಾವು ಜಮೀನನ್ನು ಮಂಜೂರು ಮಾಡಿದ್ದೇವೆ ಅಂಥವರು ೬ ವರ್ಷಗಳವರೆಗೆ ಅದನ್ನು ಪರಭಾರೆ ಮಾಡಬಾರದೆಂದು ಇದೆ. ಇದನ್ನು ೬ ವರ್ಷಕ್ಕೆ ಬದಲಾಗಿ ೧೫ ವರ್ಷಗಳವರೆಗೆ ಪರಭಾರೆ ಮಾಡಕೂಡದೆಂದು ಮಾಡಿದ್ದೇವೆ. ನೆಗೋಷಿಯಬಲ್ ಬಾಂಡ್ಸ್ ಕೊಡುವುದಕ್ಕೆ ರಿಸರ್ವ್ ಬ್ಯಾಂಕ್‌ನವರು ಒಪ್ಪದಿದ್ದರಿಂದ ೭೩ನೇ ಕಾಲಂ ಪ್ರಕಾರ ನಾನ್ ನೆಗೋಷಿಯಬಲ್ ಬಾಂಡ್ಸ್ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ.

5-00 ಪಿ.ಎಂ.

ಇದರಲ್ಲಿ ಒಂದು ಮುಖ್ಯವಾದ ಒಂದು ತಿದ್ದುಪಡಿ ಏನೆಂದರೆ, ಹೆಚ್ಚುವರಿ ಜಮೀನನ್ನು ಹಂಚುವುದಕ್ಕೆ ಟ್ರಿಬ್ಯುನಲ್‌ನವರಿಗೆ ಅವಕಾಶ ಇರಲಿಲ್ಲ. ಈಗ ಏನು ಮಾಡಿದ್ದೇವೆ ಎಂದರೆ ಹೆಚ್ಚುವರಿ ಜಮೀನನ್ನು ಪೂರ್ತಿಯಾಗಿ ಡೆಪ್ಯುಟಿ ಕಮಿಷನರ್‌ರವರ ವಶಕ್ಕೆ ಕೊಟ್ಟು ಅದನ್ನು ಅರ್ಹ ಜನಗಳಿಗೆ ಹಂಚಲು ರೆವಿನ್ಯೂ ಅಧಿಕಾರಿಗಳಿಗೆ ಅಧಿಕಾರವನ್ನು ಈ ತಿದ್ದುಪಡಿ ಮಸೂದೆಯಲ್ಲಿ ಕೊಟ್ಟಿದ್ದೇವೆ. ೧೨೨ನೇ ಕಲಮ್‌ನಲ್ಲಿ ಹೆಚ್ಚುವರಿ ಜಮೀನು ಇದ್ದವರು ಅದನ್ನು ತಪ್ಪು ಹೆಂಡತಿ ಹೆಸರಿನಲ್ಲಿ, ಮಕ್ಕಳ

ಹೆಸರಿನಲ್ಲಿ, ಮನೆಯ ಆಳಿನ ಹೆಸರಿನಲ್ಲಿ, ನಂಬಿಕಸ್ತ ಜನಗಳ ಹೆಸರಿನಲ್ಲಿ ಇಟ್ಟು ಸರಿಯಾದ ಅಂಕಿ ಅಂಶ ಗಳನ್ನು ಕೊಟ್ಟಿರಲಿಲ್ಲ. ಇದು ಹೈದರಾಬಾದ್ ಕರ್ನಾಟಕ ಮತ್ತು ಬೊಂಬಾಯಿ ಕರ್ನಾಟಕದಲ್ಲಿ ಹೆಚ್ಚಿಗೆ ನಡೆದಿದೆ.....

ಶ್ರೀ ಎಸ್. ಆರ . ಬೊಮ್ಮಾಯಿ.—ಇದು ಅಲ್ಲಿ ಮಾತ್ರ ನಡೆದಿರುವುದಲ್ಲ; ರಾಜ್ಯದ ತುಂಬಾ ನಡೆದಿದೆ.

ಶ್ರೀ ಬಿ. ಬಸವಲಿಂಗಪ್ಪ.—ಹೆಚ್ಚು ವರಿ ಜಮೀನು ಇರುವವರು ನಮ್ಮ ಕಡೆ ಕಡಿಮೆ. ಆ ಕಡೆ ಜಾಸ್ತಿ ಇದ್ದಾರೆ. ಈಗ ಕಾನೂನಿಗೆ ವಿರುದ್ಧವಾಗಿ, ಕಾನೂನನ್ನೇ ಮೂಲೋತ್ಪಾದನೆ ಮಾಡಬೇಕೆಂದು ಯಾರು ಪ್ರಯತ್ನಿಸಿದ್ದಾರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಇದರಲ್ಲಿ ವ್ಯವಸ್ಥೆ ಮಾಡಿದ್ದೇವೆ. ಇನ್ನು ಇನಾಂ ಅಬಾಲಿಷನ್‌ಗೆ ಸಂಬಂಧಪಟ್ಟಂತೆ ಬಹಳ ಕೇಸುಗಳು ಹಾಗೆಯೇ ಉಳಿದಿವೆ. ಇದರ ಬಗ್ಗೆ ಹೈಕೋರ್ಟ್‌ನವರೂ ಕೂಡ ಒಂದು ತೀರ್ಪನ್ನು ಕೊಟ್ಟಿದ್ದಾರೆ. ಈಗ ಈ ಇನಾಂ ಅಬಾಲಿಷನ್‌ಗೆ ಸಂಬಂಧಪಟ್ಟ ಕೇಸುಗಳನ್ನು ಟ್ರಿಬ್ಯುನಲ್‌ನವರೇ ತೀರ್ಮಾನ ಮಾಡಬಹುದೆಂದು ಈ ತಿದ್ದುಪಡಿಯಲ್ಲಿ ಸೇರಿಸಿದ್ದೇವೆ. ಇನ್ನು ಈ ಷೆಡ್ಯೂಲ್‌ನಲ್ಲಿ ಪ್ರಮುಖವಾಗಿರುವುದು.

> "A Class: Part (A) Schedule I"—Classification of Lands.
>
> "Lands having facilities for assured irrigation from such Government canals and Government tanks as are notified by the State Government to be capable of supplying water for growing two crops of paddy in a year".

ಈ ಒಂದು ಷೆಡ್ಯೂಲ್‌ನಲ್ಲಿರತಕ್ಕ ಹೆಚ್ಚುವರಿ ಜಮೀನು ಯಾವ ಕ್ಯಾಟಿಗರಿಗೆ ಸೇರಿದೆ ಎಂಬುದನ್ನು ಪ್ರತಿಯೊಂದು ಸರ್ವೆ ನಂಬರ್‌ನ್ನೂ ನೋಟಿ ಫೈ ಮಾಡದ ಹೊರತು ಈ ಜಮೀನನ್ನು ಹಂಚುವುದಕ್ಕಾಗು ವುದಿಲ್ಲ. ಆದ್ದರಿಂದ ಈ ಒಂದು ಮಸೂದೆಯಲ್ಲಿ ನೋಟಿಫಿಕೇಷನ್ ಆಗಲೇಬೇಕೆಂದು ಏನು ಇದೆ ಅದನ್ನು ಇಲ್ಲಿ ಕಿತ್ತುಹಾಕಿದ್ದೇವೆ. It is more of a procedural nature of approach than a fundamental one. Therefore, I commend to the House that this Bill be passed.

Alleged Atrocities on Harijans

ಶ್ರೀ ಎಸ್. ಎಸ್. ಆರಕೇರಿ.—ಸ್ವಾಮಿ ಇತ್ತೀಚೆಗೆ ಹರಿಜನರ ಮೇಲೆ ಅತ್ಯಾಚಾರಗಳು ನಡೆಯುತ್ತಿರುವುದರಿಂದ ಇದರ ಬಗ್ಗೆ ಅರ್ಧಗಂಟೆ ಕಾಲದ ಚರ್ಚೆಗೆ ಅವಕಾಶ ಕೊಡಬೇಕೆಂದು ನಾನು ಒಂದು ನೋಟೀಸ್‌ಗೆ ಸಹಿ ಮಾಡಿ ತಮಗೆ ಕಳುಹಿಸಿಕೊಟ್ಟಿದ್ದೇನೆ. ಅದನ್ನು ತಾವು ತೆಗೆದುಕೊಳ್ಳಬೇಕು. Atrocities are going on in each and every village.

MR. SPEAKER.—The Chief Minister has requested that it may be postponed to Friday.

ಶ್ರೀ ಬಿ. ಭಾಸ್ಕರಶೆಟ್ಟಿ.—ಇದನ್ನು ನಾಳೆ, ನಾಡಿದ್ದರಲ್ಲಿ ತೆಗೆದುಕೊಳ್ಳೋಣ.

ಅಧ್ಯಕ್ಷರು.—ಮಾನ್ಯ ಸದಸ್ಯರು ಹೇಳತಕ್ಕ ವಿಷಯವನ್ನು ಮಾನ್ಯ ಮಂತ್ರಿಗಳಿಗೆ ತಿಳಿಸಿ, ಅದನ್ನು ಶುಕ್ರವಾರ ತೆಗೆದುಕೊಳ್ಳವ ಹಾಗೆ ಮಾಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಾದ ಆರಕೇರಿಯವರು ಹೇಳುವಂಥಾದ್ದರಲ್ಲಿ ಅರ್ಥವಿದೆ. ನಾವು ಇಷ್ಟು ದಿವಸದವರೆಗೆ ಬೆಳಿಗ್ಗೆ ಕೂತಿದ್ದೇವೆ ಬಿಲ್ಸ್‌ಪಾಸ್ ಮಾಡಿದ್ದೇವೆ, ಮತ್ತು ಅರ್ಧ ಗಂಟೆಯ ಚರ್ಚೆಯನ್ನು ಇಲ್ಲಿಯವರೆಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಇಂಥ ಒಂದು

ಮಹತ್ವದ ವಿಚಾರದ ಬಗ್ಗೆಯೂ ಕೂಡ ನಮಗೆ ಅವಕಾಶವಾಗಿಲ್ಲ. ಇಂಥ ವಿಷಯಗಳು ಸಭೆಯಲ್ಲಿರುವಾಗ ಮಾನ್ಯ ಮಂತ್ರಿಗಳು ಇದಕ್ಕೆ ಹೊಂದಾಣಿಕೆ ಮಾಡಿಕೊಳ್ಳಬೇಕು. ಮಾನ್ಯ ಮುಖ್ಯ ಮಂತ್ರಿಗಳಿಗೆ ಅವಕಾಶ ಆಗದೇ ಹೋದರೆ, ಅವರ ಕಲೀಗ್ಸ್‌ಗೆ ಇದನ್ನು ಒಪ್ಪಿಸಬೇಕು. ಮತ್ತೆ ನಮಗೆ ಇದನ್ನು ಮಾಡುವುದಕ್ಕೆ ಅವಕಾಶವಾಗುತ್ತದೆಯೋ ಇಲ್ಲವೋ ಗೊತ್ತಾಗುವುದಿಲ್ಲ. ನಮಗೆ ಮಾನ್ಯ ಮುಖ್ಯ ಮಂತ್ರಿಗಳೆ ಉತ್ತರ ಕೊಡಬೇಕಾದಲ್ಲಿ, ಮಾನ್ಯ ಮಂತ್ರಿಗಳು ಯಾರಾದರೂ ವಿಚಾರ ತಿಳಿದುಕೊಂಡು ಉತ್ತರ ಕೊಡಬಹುದು.

ಶ್ರೀ ಬಿ. ಭಾಸ್ಕರಶೆಟ್ಟಿ.—ಕೆಲವು ಸಂದರ್ಭದಲ್ಲಿ ಅನಪೇಕ್ಷಿತ ಘಟನೆಗಳು ಬರುತ್ತವೆ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವ ವೇಳೆಗೆ ಯಾವುದಾದರೂ ಒಂದು ತುರ್ತು ಕೆಲಸ ಬರುತ್ತದೆ. ಅವರು ಆ ಮನೆಯಲ್ಲಿದ್ದಾರೋ ಏನೋ ಗೊತ್ತಿಲ್ಲ. ಸೋಮವಾರದ ದಿವಸ ಇದನ್ನು ಖಂಡಿತವಾಗಿಯೂ ಹಾಕಿಸೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದಕ್ಕಿಂತಹ ಹೆಚ್ಚಿನ ಕೆಲಸ ಮುಖ್ಯ ಮಂತ್ರಿಗಳಿಗೆ ಇರಲಾರದು ಎಂದು ನನ್ನ ಭಾವನೆ. ಅವರು ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸತಕ್ಕದ್ದು ಮಹತ್ವವಾದದ್ದು. ಸಭೆಯು ನಡೆಯುವಾಗ, ಸಭೆಗೆ ಗೌರವ ಕೊಡಬೇಕು ಮತ್ತು ಅವರು ಇಲ್ಲಿ ಇರಬೇಕು. ಇದಕ್ಕಿಂತ ಮಹತ್ವದ್ದು ಬೇರೆ ಇಲ್ಲ ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ —ಸಭೆಗೆ ಅವರು ಎಂದೂ ಅಗೌರವವನ್ನು ತೋರಿಸಿಲ್ಲ ಎರಡು ಸಭೆಗಳು ನಡೆಯುತ್ತಾ ಇರುವುದರಿಂದ ಅಲ್ಲಿಯೂ ಇವರಿಗೆ ಕೆಲವು ಸಭ್ಟಿಕ್ಟ್‌ಸ್ ಇರುತ್ತವೆ ಆದ್ದರಿಂದ ಇದನ್ನು ಮುಂದಕ್ಕೆ ಹಾಕಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಭಾಸ್ಕರ ಶೆಟ್ಟಿಯವರು ಹೇಳಿದ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಆ ಮನೆಯಲ್ಲಿದ್ದರೆ ನಾನು ಒಪ್ಪಿಕೊಳ್ಳುತ್ತೇನೆ. ಒಂದು ವೇಳೆ ಆ ಮನೆಯು ಕಾರ್ಯಕಲಾಪಗಳಲ್ಲಿ ಅವರು ಭಾಗವಹಿಸದೇ ಹೋದರೆ ತಪ್ಪಾಗುತ್ತದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಅದು ನನಗೆ ಗೊತ್ತಿಲ್ಲ. ಒಂದು ಸಾರಿ ನಾನು ಮಾನ್ಯ ಮುಖ್ಯ ಮಂತ್ರಿಗಳು ಆ ಮನೆಯಲ್ಲಿರುವಾಗ ನಾನೇ ಹೋಗಿ ಕರೆದುಕೊಂಡು ಬಂದೆ. ಈಗ ಅವರು ಅಲ್ಲಿದ್ದಾರೋ ಏನೋ ಗೊತ್ತಿಲ್ಲ.

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ವಿಚಾರವನ್ನು ತಿಳಿಸಿ, ಇದನ್ನು ನಾಳೆಯೇ ತೆಗೆದುಕೊಳ್ಳುವ ಹಾಗೆ ಮಾಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ,—ಈ ತರಹ ಆಗಲಾರದು ಎಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಲ್ಯಾಂಡ್ ರಿಫಾರಂಸ್ ಬಿಲ್ಲಿನ ಚರ್ಚೆಯನ್ನು ನಾಳೆಗೆ ಹಾಕಬಹುದು.

ಶ್ರೀ ಪಿ. ರಾಮದೇವ್.—ಮೊನ್ನೆ ತಾನೇ ಜ್ಞಾನಪೀಠದ ಪ್ರಶಸ್ತಿಯು ಡಾಕ್ಟರ್ ಶಿವರಾಮ ಕಾರಂತ್ ಅವರಿಗೆ ಕೊಡಲಾಗಿದೆ. ಈ ಬಗ್ಗೆ ನಾನು ತಮಗೆ ಒಂದು ನೋಟೀಸನ್ನು ಕೊಟ್ಟಿದ್ದೇನೆ. ನಾಳೆಗೆ ಅದನ್ನು ತೆಗೆದುಕೊಳ್ಳುವ ಹಾಗೆ ಮಾಡಿಸಬೇಕು. ಎಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಸಭೆಯಲ್ಲಿ ಇಲ್ಲದೆ ಇರುವುದರಿಂದ ಮಾನ್ಯ ಆರಕೇರಿಯವರ ಅರ್ಧ ಗಂಟೆ ಚರ್ಚೆಯ ನೋಟೀಸ್ ಬಗ್ಗೆ ಮಾನ್ಯ ಮಂತ್ರಿಗಳ ಅಭಿಪ್ರಾಯವೇನು ಎಂದು ತಿಳಿಯಬಹುದೇ? ಹಾಗೆಯೇ, ಮಾನ್ಯ ರಾಮದೇವ್ ಅವರು ಕೇಳಿದಂಥ ವಿಷಯದ ಬಗ್ಗೆ ತಾವು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದನ್ನು ಅಂಗೀಕಾರ ಮಾಡದೆ ಏನನ್ನೂ ಹೇಳುವಂತಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಈಗ ತಾನೆ ಹೊರಗಡೆ ಹೋಗಿದ್ದಾರೆ. (ಈ ವಿಷಯ ಅವರಿಗೆ ಸಂಬಂಧಪಟ್ಟದ್ದು. ಚರ್ಚೆಯು ನಡೆಯಬಹುದು, ಆದರೆ ಅಂಥ ವಿಷಯಗಳು ಏನಾದರೂ ಇದ್ದಲಿ ನಾನು ಅವರಿಗೆ ತಿಳಿಸುತ್ತೇನೆ.)

Half-an-Hour Discussion arising out of replies to *Question No. 95 on 13th June 1978.

re: C. R. E. Cell

†ಶ್ರೀ ಎಸ್. ಎಸ್. ಅರಕೇರಿ (ಬಳ್ಳಾರಿ).—ಸನ್ಮಾನ ಅಧ್ಯಕ್ಷರೇ, ನಾನು ಎರಡನೆಯ ಪಟ್ಟಿಯ ಚುಕ್ಕೆ ಗುರುತಿನ ಪ್ರಶ್ನೆಯನ್ನು ಕೇಳಿದಾಗ ಮಾನ್ಯ ಮಂತ್ರಿಗಳಿಂದ ಬಂದ ಉತ್ತರ ಕೊಟ್ಟರು. ನನ್ನ ಪ್ರಶ್ನೆ ಈ ರೀತಿ ಇದೆ.

> "(a) When the C. R. E. Cell started; (b) Whether the entire expenditure on this cell is being met by the Centrel Government, (c) If so, the amount alloted from the Central Government and the amount spent so far.?"

ಈ ಪ್ರಶ್ನೆಗೆ ಉತ್ತರವಾಗಿ ಸಮಾಜ ಕಲ್ಯಾಣ ಸಚಿವರು ಉತ್ತರವನ್ನು ಹೇಳಿದ್ದಾರೆ. ಅವರಿಂದ ಈ ಪ್ರಶ್ನೆಗೆ ಸರಿಯಾದಂಥ, ತೃಪ್ತಿಕರವಾದಂಥ ಉತ್ತರ ಸಿಕ್ಕದೆ ಇರುವುದರಿಂದ ಮತ್ತು ಈ ಪ್ರಶ್ನೆ ಗಂಭೀರವಾಗಿರುವುದರಿಂದ ಈ ಮೂಲಕ ನಾನು ಇದರ ಬಗ್ಗೆ ಚರ್ಚೆಯನ್ನು ಪ್ರಾರಂಭಿಸಿದ್ದೇನೆ. ಇದರಲ್ಲಿ ನಾನು ಮುಖ್ಯವಾಗಿ ಒಂದೆರಡು ಸಲಹೆಗಳನ್ನು ಮಾತ್ರ ಕೊಡಬಯಸುತ್ತೇನೆ. ನಮ್ಮ ರಾಜ್ಯ ಸರ್ಕಾರದಲ್ಲಿ ೧೯೭೪ನೇ ಇಸವಿಯಲ್ಲಿ ಸಿವಿಲ್ ರೈಟ್ಸ್ ಎನ್‌ಫೋರ್ಸ್‌ಮೆಂಟ್ ಸೆಲ್ ಪ್ರಾರಂಭವಾಗಿದೆ. ಅಂದಿನಿಂದ ಇಂದಿನವರೆಗೂ ಅಂದರೆ ಕಳೆದ ಮೂರು ವರ್ಷಗಳಲ್ಲಿ, ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಈ ಬಗ್ಗೆ ೧೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಸಿಬ್ಬಂದಿ ವರ್ಗ ಕೇವಲ ೩೩ ಜನ ಇದ್ದಾರೆ, ಇದರಲ್ಲಿ ಹರಿಜನಗಿರಿಜನರು ಕೇವಲ ನಾಲ್ಕು ಜನ ಇದ್ದಾರೆ. ಕಳೆದ ಮೂರು ವರ್ಷದಲ್ಲಿ ಹರಿಜನರ ಮೇಲೆ ಹಲ್ಲೆಯ ಪ್ರಕರಣಗಳು, ಅಸ್ಪೃಶ್ಯತಾ ನಿವಾರಣೆಯ ಕೆಳಗೆ ಎಪ್ಪೆಷ್ಟು ಕೇಸುಗಳನ್ನು ಬುಕ್ ಮಾಡಿದ್ದಾರೆಂದು ಕೇಳಿದಾಗ ಈ ಕೆಳಗಿನ ಅಂಕಿ ಅಂಶಗಳನ್ನು ಸರ್ಕಾರದವರು ಕೊಟ್ಟಿದ್ದಾರೆ.

೧೯೭೫ನೇ ಇಸವಿಯಲ್ಲಿ, ೪೬೯ ಕೇಸುಗಳನ್ನು ಬುಕ್ ಮಾಡಿ, ೩೫೯ರ ಮೇಲೆ ಚಾರ್ಜ್ ಷೀಟ್ ಹಾಕಿ, ಕನ್ ವಿಕ್ಷನ್ ಆಗಿರುವುದು ೧೫೭ ಆಗಿದೆ. ಆದೇರೀತಿಯಲ್ಲಿ, ೧೯೭೬ರಲ್ಲಿ ೫೯೨ ಕೇಸುಗಳನ್ನು ಬುಕ್ ಮಾಡಿದ್ದಾರೆ, ೫೪೯ರ ಮೇಲೆ ಚಾರ್ಜ್‌ಷೀಟ್ ಹಾಕಿದ್ದಾರೆ, ೨೦೭ ಕೇಸುಗಳು ಕನ್‌ವಿಕ್ಟ್ (ಸಜಾ) ಆಗಿವೆ. ಹಾಗೆಯೇ ೧೯೭೭ನೇ ಇಸವಿಯಲ್ಲಿ ೩೨೯ ಕೇಸುಗಳು ಬುಕ್ ಆಗಿವೆ, ೨೪೩ರ ಮೇಲೆ ಚಾರ್ಜ್ ಷೀಟ್ ಹಾಕಿದ್ದಾರೆ. ಈ ರೀತಿಯಾಗಿ ಕಳೆದ ಮೂರು ವರ್ಷದಲ್ಲಿ ಅಸ್ಪೃಶ್ಯತಾ ನಿವಾರಣಾ ಕಾಯಿದೆಯ ಕೆಳಿಗೆ, ಮತ್ತು ಇಂಡಿಯನ್ ಪೀನಲ್ ಕೋಡ್ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಇಷ್ಟು ಕೇಸುಗಳು ಹಾಕಲಾಗಿದೆ. ಕೆಲವು ಕೇಸುಗಳು (Compromise) ಕಾಂಪ್ರೊಮೈಸ್ or other wise disposed ಎನ್ನುವ ಮಾತನ್ನೂ ಅವರು ಹೇಳಿದ್ದಾರೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ನಾವು ನೋಡುತ್ತಿದ್ದೇವೆ, ಕಳೆದ ೩೦ ವರ್ಷಗಳಿಂದಲೂ ಇಂಥ ಹಲ್ಲೆಗಳು ನಡೆಯುತ್ತಿರುವುದನ್ನು ಯಾವುದೇ ಸರ್ಕಾರವೇ ಇರಲಿ, ಯಾವ ಪಕ್ಷದರೇ ಇರಲಿ, ಆದರೆ ಹರಿಜನರ ಮೇಲೆ ನಿರಂತರವಾಗಿ ಹಲ್ಲೆ ನಡೆಯುತ್ತಿದೆ, ಅವರ ಮೇಲೆ ನಿರಂತರವಾಗಿ ದಬ್ಬಾಳಿಕೆ ನಡೆಯುತ್ತಿದೆ. ಇದರ ಬಗ್ಗೆ ಕಾನೂನಿಂದ ಕ್ರಮ ಜರುಗಿಸುವಂಥಾದ್ದು ಯಾವ ದೃಷ್ಟಿಯಿಂದಲೂ ಆಗಿಲ್ಲ. ಈ ಬೃಹದಾಕಾರವಾದ ಸಮಸ್ಯೆಯು ಇನ್ನೂ ಬಗೆಹರಿದಿಲ್ಲ. The Government has failed to give protection to the untouchables all over the State. ಆದ್ದರಿಂದ ನಾನು ಈ ಸದನದಲಿ ಅನೇಕ ಸಲ ಈ ಸಮಸ್ಯೆಗಳನ್ನು ತಂದಿದ್ದೇನೆ. ಹರಿಜನರ ಮೇಲೆ ಎಲ್ಲೆಲ್ಲಿ ಹಲ್ಲೆ ನಡೆಯುತ್ತಿದೆ, ಹತ್ಯಾಚಾರ ನಡೆಯುತ್ತಿದೆ, ಅನ್ಯಾಯ ನಡೆದಿದೆ ಯಾವರೀತಿಯಾಗಿ ಹೆಣ್ಣು ಮಕ್ಕಳ ಮಾನ ಭಂಗ ಹರಿಜನೇತರರು ಮಾಡಿದ್ದಾರೆ, ಎನ್ನುವ ಬಗ್ಗೆಯೂ ಹೇಳಿದ್ದೇನೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡಬೇಕಾದರೆ, ಬಿಜಾಪುರ ಜಿಲ್ಲೆಯಲ್ಲಿ ನಾಗರಬೆಟ್ಟ ಎಂಬ ಒಂದು ಹಳ್ಳಿಯು ಇದೆ. ಆ ಹಳ್ಳಿಯಲ್ಲಿ ಸಾಮೂಹಿಕವಾಗಿ ಹರಿಜನರನ್ನು ಬಹಿಷ್ಕಾರ ಮಾಡಿಟ್ಟಿದ್ದಾರೆ. ಕಾರಣ ಏನೆಂದರೆ, ಅವರು ತಮ್ಮ ಊರ ಜನರಿಗೆ ವಿಚಾರಿಸದೆ ಚುನಾವಣೆಯಲ್ಲಿ ಮತ ಹಾಕಿರುವದರಿಂದ ಊರಜನರು ಹೇಳಿದಂತೆ ಕೇಳದೆ ಇರುವುದರಿಂದ ಅವರನ್ನು ಊರೊಳಗೆ ಬರಗೊಟ್ಟಿಲ್ಲ ಹೆಣ್ಣು ಮಕ್ಕಳ ಮಾನಭಂಗವನ್ನು ಮಾಡಿದಂತಹ ಸಂದರ್ಭದಲ್ಲಿ ಅವರವರಿಗೆ ಘರ್ಷಣೆಯಾಗಿ ಊರೊಳಗೆ